ಯಾವ ಜನರು ತಮ್ಮ ಆಡಳಿತದ (ಅಥವಾ ಅಧಿಕಾರದ) ವಿಷಯವನ್ನು ಮಹಿಳೆಗೆ ವಹಿಸಿಕೊಡುತ್ತಾರೋ, ಆ ಜನರು ಎಂದಿಗೂ ಯಶಸ್ವಿಯಾಗುವುದಿಲ್ಲ

ಅಬೂ ಬಕ್ರಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ಕೇಳಿದರು: "ಯಾವ ಜನರು ತಮ್ಮ ಆಡಳಿತದ (ಅಥವಾ ಅಧಿಕಾರದ) ವಿಷಯವನ್ನು ಮಹಿಳೆಗೆ ವಹಿಸಿಕೊಡುತ್ತಾರೋ, ಆ ಜನರು ಎಂದಿಗೂ ಯಶಸ್ವಿಯಾಗುವುದಿಲ್ಲ".
[صحيح] [رواه البخاري]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿವರಿಸುವುದೇನೆಂದರೆ, ಯಾವ ಜನರು ತಮ್ಮ ಅಧಿಕಾರದ ವಿಷಯಗಳನ್ನು — ಅಂದರೆ ತೀರ್ಪು ನೀಡುವುದು (ನ್ಯಾಯಾಂಗ), ಸಾರ್ವಜನಿಕ ಆಡಳಿತ, ಅಥವಾ ಮಂತ್ರಿಗಿರಿ (ಸಚಿವ ಸ್ಥಾನ) — ಮಹಿಳೆಗೆ ವಹಿಸುತ್ತಾರೋ ಮತ್ತು ಆಕೆಯನ್ನು ಅಧಿಕಾರಿಯನ್ನಾಗಿ ಮಾಡುತ್ತಾರೋ, ಅವರು ತಮಗೆ ಬೇಕಾದುದನ್ನು ಪಡೆಯುವುದಿಲ್ಲ ಅಥವಾ ವಿಜಯಿಗಳಾಗುವುದಿಲ್ಲ.

http://www.sunnah.global/hadeeth/kn/show/64687